# ಕರ್ನಾಟಕ ಸರ್ಕಾರ

## ತಹಶೀಲ್ದಾರರು, ಸಿರುಗುಪ್ಪ ಇವರ ನ್ಯಾಯಾಲಯ, ಸಿರುಗುಪ್ಪ.

**ಸಂ.ಕಂ/ಹಬ/ವಿವಾದ/69/2014-15** **ದಿ:17-09-2016**

| ವಾದಿಗಳು | ಪ್ರತಿವಾದಿಗಳು |
|---|---|
| 1.ವೆಂಕಟೇಷ ಗುರುನಾಥ ತಂದೆ ಸಿ.ಹೆಚ್. ರಾಮಕೃಷ್ಣರಾವ್. ವಕ್ರಾಣಿ ಕ್ಯಾಂಪ್. ಮಾನ್ವಿ ತಾಲೂಕು. ರಾಯಚೂರು ಜಿಲ್ಲಾ.<br>2. ಸಿ.ಹೆಚ್. ಸುಧಾಕರ ತಂದೆ ಸಿ.ಹೆಚ್. ನಾಗೇಶ್ವರರಾವ್, (ನಂದಿಪುರ ಕ್ಯಾಂಪ್) ಬಾಗೇವಾಡಿ ಗ್ರಾಮ | ವೆಂಕಟಶೇಷ ಗುರುನಾಥಂ ತಂದೆ ಸಿ.ಹೆಚ್. ರಾಮಕೃಷ್ಣರಾವ್. 5-95-26 ಫ್ಲಾಟ್ ನಂ:201. ಸ್ನೇಹ ರೆಸಿಡೆನ್ಸಿ, ಅಪಾರ್ಟ್‌ಮೆಂಟ್ 6/12 ಬ್ರೋಡಿಪೇಟ್, ಗುಂಟೂರು-522 002 |

**ದಾವಾ ಜಮೀನಿನ ವಿವರ**

| ತಾಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ | ತರಹೆ |
|---|---|---|---|---|
| ಸಿರುಗುಪ್ಪ | ಮಿಟ್ಟೇಸೂಗೂರು | 65/ಎ | 31-76 | ಖುಷ್ಕಿ |

ಪೀಠಿಕೆ;-

ಸಿರುಗುಪ್ಪ ತಾಲೂಕು ಮಿಟ್ಟೇಸೂಗೂರು ಗ್ರಾಮದ ಸ.ನಂ:65/ಎ, ವಿ:31-76 ಎಕ್ರೆ ಜಮೀನಿಗೆ ನೋಂದಣಿ ಕ್ರಯಪತ್ರ ಸಂಖ್ಯೆ:5150/2014-15 ದಿನಾಂಕ:04-12-2014 ರ ಪ್ರಕಾರ ಹಾಲಿ ಪಟ್ಟಾದಾರರಾದ **ವೆಂಕಟೇಷ ಗುರುನಾಥ ತಂದೆ ಸಿ.ಹೆಚ್.ರಾಮಕೃಷ್ಣರಾವ್** ಇವರಿಂದ **ಸಿ.ಹೆಚ್.ಸುಧಾಕರ ತಂದೆ ಸಿ.ಹೆಚ್.ನಾಗೇಶ್ವರರಾವ್** ಇವರು ಕ್ರಯ ನೋಂದಣಿ ಹೊಂದಿದ್ದು, ಕ್ರಯದಾರರ ಹೆಸರಿಗೆ ಹಕ್ಕುಬದಲಾವಣೆ ಮಾಡಲು, ತಾಲೂಕು ಕಛೇರಿ ಭೂಮಿ ಗಣಕೀಕರಣ ಶಾಖೆಯಿಂದ ಕಂದಾಯ ನಿರೀಕ್ಷಕರು ಹಚ್ಚೊಳ್ಳಿ ಇವರಿಗೆ ಚೆಕ್‌ಲಿಸ್ಟ್‌ನ್ನು ಕಳುಹಿಸಲಾಗಿ ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 65 ರಂತೆ ನಮೂನೆ 21 ರ ನೋಟೀಸನ್ನು ಗ್ರಾ.ಲೆ. ಮಿಟ್ಟೇಸೂಗೂರು ಇವರು ಗ್ರಾಮದಲ್ಲಿ ಪ್ರಚುರಪಡಿಸಿರುತ್ತಾರೆ. ಸದ್ರಿ ಪ್ರಕರಣದಲ್ಲಿ ಹಕ್ಕು ಬದಲಾವಣೆ ಮಾಡುವ ಸಮಯದಲ್ಲಿ ನಿಗದಿತ ಅವಧಿಗೆ ಮುಂಚೆ **ವೆಂಕಟ ಶೇಷ ಗುರುನಾಥಂ ತಂದೆ ಸಿ.ಹೆಚ್. ರಾಮಕೃಷ್ಣರಾವ್** ಇವರು "ಸದರಿ ಪ್ರಕರಣದಲ್ಲಿ ಕ್ರಯದಾರರಾದ ಸಿ.ಹೆಚ್.ಸುಧಾಕರ ಇವರು ಸುಳ್ಳು ದಾಖಲೆ ಸೃಷ್ಟಿಸಿ ಖೊಟ್ಟಿ ದಸ್ತಾವೇಜು ಮಾಡಿಸಿಕೊಂಡಿರುವುದರಿಂದ ಕ್ರಯದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಬಾರದೆಂದು" ದಿನಾಂಕ:03-01-2015 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು ಹಚ್ಚೊಳ್ಳಿ ಇವರು ಸದ್ರಿ ಪ್ರಕರಣವನ್ನು ವಿವಾದಾಸ್ಪದವೆಂದು ಪರಿಗಣಿಸಿ ಹ.ಬ.ಸಂಖ್ಯೆ:11/2014-15 ದಿ:16-01-2015 ರ ಪ್ರಕಾರ ಈ ನ್ಯಾಯಾಲಯಕ್ಕೆ ಕಡತವನ್ನು ಸಲ್ಲಿಸಿರುತ್ತಾರೆ.

ಸದ್ರಿ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ನೋಂದಾಯಿಸಿಕೊಂಡು ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 67 ಮತ್ತು 43 ರಂತೆ ಪ್ರಕರಣದಲ್ಲಿನ ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸುಗಳನ್ನು ಜಾರಿ ಮಾಡಿ ಪ್ರಕರಣದ ವಿಚಾರಣೆಯನ್ನು ದಿ:25-04-2015 ರಿಂದ 28-09-2015 ರ ವರೆಗೆ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ಪ್ರತಿವಾದಿ ಮತ್ತು ಇವರ ಪರ ವಕೀಲರು ವಿಚಾರಣೆಗೆ ಹಾಜರಾಗಿರುತ್ತಾರೆ.

ಕರ್ನಾಟಕ ಸರ್ಕಾರ ಸಿರುಗುಪ್ಪ ತಹಶೀಲ್ದಾರರ ನ್ಯಾಯಾಲಯ

ಸದ್ರಿ ಪ್ರಕರಣದಲ್ಲಿ ದಾಖಲೆ ಪರಿಶೀಲಿಸಿ, ಪ್ರತಿವಾದಿಗಳ ವಾದ ಆಲಿಸಲಾಯಿತು. ಪ್ರತಿವಾದಿಯ ಹೇಳಿಕೆ ಪ್ರಕಾರ "ಸದ್ರಿ ಜಮೀನು ತಮ್ಮ ಹೆಸರಿನಲ್ಲಿದ್ದು ಕ್ರಯದಾರರಾದ ಸಿ.ಹೆಚ್.ಸುಧಾಕರ ಇವರು ಸುಳ್ಳು ದಾಖಲೆ ಸೃಷ್ಟಿಸಿ ಖೊಟ್ಟಿ ದಸ್ತಾವೇಜು ಮಾಡಿಸಿಕೊಂಡಿರುವುದರಿಂದ ಕ್ರಯದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಬಾರದೆಂದು ತಾವು ತಕರಾರು ಸಲ್ಲಿಸಿದ್ದು, ಪ್ರಸ್ತುತ ಸದ್ರಿ ಕ್ರಯ ನೋಂದಣಿಯನ್ನು ವಿಕ್ರಯ ರದ್ದುಪತ್ರ ಸಂಖ್ಯೆ:5816/2014-15 ದಿ:13-01-2015 ರ ಪ್ರಕಾರ ಕ್ರಯ ವಹಿವಾಟನ್ನು ರದ್ದುಗೊಳಿಸಿರುವುದರಿಂದ, ಹಾಲಿ ಪಹಣಿಯಲ್ಲಿನ ನಮೂದುಗಳನ್ನು ಹಾಗೆಯೇ ಮುಂದುವರೆಸಲು ಕೋರಿ, ದಾಖಲೆ ಹಾಜರುಪಡಿಸಿರುತ್ತಾರೆ.

ಆದ್ದರಿಂದ, ಸಿರುಗುಪ್ಪ ತಾಲೂಕು ಮಿಟ್ಟೇಸೂಗೂರು ಗ್ರಾಮ ಸ,ನಂ:65/ಎ, ವಿ:31-76 ಎಕ್ರೆ ಜಮೀನಿಗೆ ಸಂಭಂದಿಸಿ ಕ್ರಯ ನೋಂದಣಿ ರದ್ದುಪಡಿಸಿಕೊಂಡ ದಾಖಲೆ ಸಲ್ಲಿಸಿರುವುದರಿಂದ, ಪ್ರಕರಣ ಮುಕ್ತಾಯಗೊಳಿಸಲು ಹಾಗೂ ಹಾಲಿ ಪಹಣಿಯಲ್ಲಿನ ನಮೂದುಗಳನ್ನು ಯಥಾರೀತಿ ಮುಂದುವರೆಸಲು ಸದ್ರಿ ಪ್ರಕರಣದಲ್ಲಿ ಈ ಕೆಳಕಂಡ ಆದೇಶ-

**ಸಂ.ಕಂ/ಹಬ/ವಿವಾದ/69/2014-15** **ದಿ:17-09-2016**

**ಆದೇಶ**

ಪೀಠಿಕೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆ, ವಾಸ್ತವಾಂಶ ಹಾಗೂ ದಾಖಲೆಗಳನ್ವಯ ಸಿರುಗುಪ್ಪ ತಾಲೂಕು ಮಿಟ್ಟೇಸೂಗೂರು ಗ್ರಾಮದ ಸ,ನಂ:65/ಎ, ವಿ:31-76 ಎಕ್ರೆ ಜಮೀನಿಗೆ ನೋಂದಣಿ ಕ್ರಯಪತ್ರ ಸಂಖ್ಯೆ:5150/2014-15 ದಿನಾಂಕ:04-12-2014 ರ ಪ್ರಕಾರ ಮಾಡಿಕೊಂಡ ಕ್ರಯ ನೋಂದಣಿಯನ್ನು ವಿಕ್ರಯ ರದ್ದುಪತ್ರ ಸಂಖ್ಯೆ:5816/2014-15 ದಿ:13-01-2015 ರ ಪ್ರಕಾರ ರದ್ದುಗೊಳಿಸಿರುವುದರಿಂದ, ಪ್ರಕರಣವನ್ನು ಮುಕ್ತಾಯಗೊಳಿಸಲು ಹಾಗೂ ವಹಿವಾಟನ್ನು ವಿಲೇಗೊಳಿಸಿ, **ಹಾಲಿ ಪಹಣಿಯಲ್ಲಿನ ನಮೂದುಗಳನ್ನು ಯಥಾರೀತಿ ಮುಂದುವರೆಸಲು ಆದೇಶಿಸಿದೆ.**

M. Dutta

**ತಹಶೀಲ್ದಾರರು,ಸಿರುಗುಪ್ಪ**

ಕರ್ನಾಟಕ ಸರ್ಕಾರ ಸಿರುಗುಪ್ಪ ತಹಶೀಲ್ದಾರರ ನ್ಯಾಯಾಲಯ

ಗೆ,

1.ಭೂಮಿ ಗಣಕೀಕರಣ ಶಾಖೆಗೆ ಸೂಕ್ತ ಕ್ರಮಕ್ಕಾಗಿ

2.ವಾದಿ-ಪ್ರತಿವಾದಿಗಳಿಗೆ

3.ಕಛೇರಿ ಕಡತಕ್ಕೆ